ದಿನಾಂಕ 22.12.2018 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರವರ ಅಧ್ಯಕ್ಷತೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ರವರೊಂದಿಗೆ ನಡೆದ ವಿಡಿಯೋ ಸಂವಾದದ ಪ್ರಗತಿ ಪರಿಶೀಲನಾ ನಡವಳಿಗಳು.

-

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಹಾಜರಿದ್ದ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ವಿಡಿಯೋ ಸಂವಾದ ಕಾರ್ಯಕ್ರಮಕ್ಕೆ ಸ್ವಾಗತಿಸಿ, ವಿಷಯಸೂಚಿಯಾನುಸಾರ ಪ್ರಗತಿ ಪರಿಶೀಲನೆ ನಡೆಸಿ, ಈ ಕೆಳಕಂಡಂತೆ ಸೂಚನೆಗಳನ್ನು ನೀಡಿದರು.

❖ **ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ:**

1. ಕೊಳವೆ ನೀರು ಸರಬರಾಜು, ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಇತರೆ ಕಾರ್ಯಕ್ರಮಗಳಡಿ ತೆಗೆದುಕೊಳ್ಳಲಾದ ಎಲ್ಲಾ ಕಾಮಗಾರಿಗಳನ್ನು **ಮಾರ್ಚ್ 2019 ರ** ಅಂತ್ಯದೊಳಗಾಗಿ ಪೂರ್ಣಗೊಳಿಸುವುದು.
2. WPP ಗಳು ತಾಂತ್ರಿಕ ಮತ್ತು ಆಡಳಿತಾತ್ಮಕ ನಿಬಂಧನೆಗಳನ್ವಯ ಸ್ಥಾಪಿತವಾಗಿ ಕಾರ್ಯಗತವಾಗುವಂತೆ ನೋಡಿಕೊಳ್ಳತಕ್ಕದ್ದು.
3. 2018–19ನೇಸಾಲಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ **ವಾರ್ಷಿಕ ಗುರಿ 3,000** ಇದ್ದು, **ನವೆಂಬರ್ ಅಂತ್ಯಕ್ಕೆ 2,238** ಪ್ರಗತಿ ಸಾಧಿಸಲಾಗಿದೆ. ದಾವಣಗೆರೆ, ಹಾಸನ, ಬಳ್ಳಾರಿ, ಬಾಗಲಕೋಟೆ, ಜಿಲ್ಲೆಗಳು ಸೇರಿದಂತೆ ಎಲ್ಲಾ ಜಿಲ್ಲೆಗಳು ಇನ್ನೂ ಹೆಚ್ಚಿನ ಆದ್ಯತೆ ನೀಡಿ ದಿನಾಂಕ 30.01.2019 ರೊಳಗೆ ವಾರ್ಷಿಕ ಗುರಿಗೆ ಶೇ.100 ರಷ್ಟು ಪ್ರಗತಿ ಸಾಧಿಸುವುದು.
4. ಬಹುಗ್ರಾಮ ಯೋಜನೆಯಡಿ ರಾಜ್ಯದಲ್ಲಿ ಅನುದಾನ ಲಭ್ಯತೆಯಿದ್ದು, ಸದರಿ ಅನುದಾನವನ್ನು ಬಳಸಿಕೊಳ್ಳಲು ಅನುವಾಗುವಂತೆ ಮುಂದುವರೆದ ಕಾಮಗಾರಿಗಳ ವಿವರಗಳನ್ನು IMIS ಹಾಗೂ **"ಗಾಂಧಿ ಸಾಕ್ಷಿ ಕಾಯಕ"** ತಂತ್ರಾಂಶದಲ್ಲಿ ಸರಿಯಾಗಿ ದಾಖಲಾತಿ ಮಾಡುವ ಮೂಲಕ ಮುಂದುವರೆದಿರುವ **105 MVS ಯೋಜನೆಗಳಿಗೆ** ಅಗತ್ಯ ಅನುದಾನವನ್ನು ಪಡೆಯಲು ಕ್ರಮ ಕೈಗೊಳ್ಳಬೇಕು.
5. ಕೊಡಗು ಹಾಗೂ ಇತರೆ ಜಿಲ್ಲೆಗಳಲ್ಲಿ IMIS ದಾಖಲೆ ಸಂಬಂಧ ತಾಂತ್ರಿಕ ಸಮಸ್ಯೆಯಿಂದ ವೆಚ್ಚದ ವಿವರ ಪ್ರತಿಬಿಂಬಿತವಾಗುತ್ತಿಲ್ಲವಾದ್ದರಿಂದ ಸದರಿ ಸಮಸ್ಯೆಯನ್ನು ರಾಜ್ಯ ಮಟ್ಟದಲ್ಲಿ ತುರ್ತಾಗಿ

ಬಗೆಹರಿಸಲು ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಇವರು ಕ್ರಮ ವಹಿಸತಕ್ಕದ್ದು.

6. ಪ್ರಸಕ್ತ ಸಾಲಿನಲ್ಲಿ ಎನ್.ಆರ್.ಡಿ.ಡಬ್ಲ್ಯೂ.ಪಿ. ಯೋಜನೆಯಡಿ ಜಿಲ್ಲಾವಾರು ನಿಗದಿಪಡಿಸಲಾದ ಅನುದಾನವನ್ನು ಆಯಾ ಘಟಕವಾರು, ಅನುಮೋದಿತ ಕ್ರಿಯಾ ಯೋಜನೆಯನ್ವಯ ಪೂರ್ಣವಾಗಿ ಬಳಕೆ ಮಾಡಿ, IMIS ನಲ್ಲಿ ಆರ್ಥಿಕ ಮತ್ತು ಭೌತಿಕ ಪ್ರಗತಿ ದಾಖಲಿಸಬೇಕು.

7. ದಿನಾಂಕ 28.11.2018 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಸಚಿವರು ನೀಡಿದ ಸೂಚನೆಯಂತೆ, 2018-19ನೇ ಸಾಲಿನ ಅನುಮೋದಿತ **ಕ್ರಿಯಾ ಯೋಜನೆಯಡಿ ರೂ. 5 ಲಕ್ಷ ಅಂದಾಜುಗಳೊಳಗಿರುವ ಕಾಮಗಾರಿಗಳ ಕಾರ್ಯದೇಶಗಳನ್ನು ಡಿಸೆಂಬರ್ 10.12.2018 ರೊಳಗಾಗಿ** ನೀಡಬೇಕಾಗಿತ್ತು. ಆದಾಗ್ಯೂ ಇನ್ನೂ 13,397 ಕಾಮಗಾರಿಗಳಿಗೆ 28 ಜಿಲ್ಲಾ ಪಂಚಾಯತಿಗಳು ಕಾರ್ಯದೇಶ ನೀಡುವುದು ಬಾಕಿಯಿದ್ದು, ಈ ಗಂಭೀರ ವಿಷಯದಲ್ಲಿ ವಿಳಂಬ ಮಾಡದೇ ತಕ್ಷಣ ಸದರಿ ಜಿಲ್ಲಾ ಪಂಚಾಯತಿಗಳು ಕೂಡಲೇ ಕಾಮಗಾರಿಗಳಿಗೆ ಕಾರ್ಯದೇಶ ನೀಡುವುದು.

8. ಬರಪರಿಸ್ಥಿತಿ ಹಿನ್ನೆಲೆಯಲ್ಲಿ ಅಲ್ಪಾವಧಿ (15 ದಿನಗಳು) ಟೆಂಡರ್ ಕರೆದು ಯೋಜನೆಗಳ ಪ್ರಗತಿ ತೀವ್ರಗೊಳಿಸಬೇಕು.

9. ಕೊಳವೆ ನೀರು ಸರಬರಾಜು ಯೋಜನೆಯಡಿ '0'- ಪೂರ್ಣಗೊಂಡಿರುವ ಜಿಲ್ಲಾ ಪಂಚಾಯತಿಗಳು ಪ್ರಗತಿ ತೀವ್ರಗೊಳಿಸಬೇಕು.

10. ಗದಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತಿಗಳು ಕಾರ್ಯ ಸಿಂಧುತ್ವವಿಲ್ಲದಿರುವ ಗ್ರಾನೀಸ ಯೋಜನೆಗಳಿಗೆ ಬದಲಾಗಿ ಸೂಕ್ತ ಗ್ರಾನೀಸ ಚಾಲ್ತಿ ಮಾರ್ಗಸೂಚಿಗಳನ್ವಯ ಅನುಮೋದನೆಗಾಗಿ ಯೋಜನೆಗಳನ್ನು ಪ್ರಸ್ತಾಪಿಸಬೇಕು.

11. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರಾಜ್ಯಮಟ್ಟದ ಪರಿವೀಕ್ಷಣಾ ಸಭೆಗೆ ವಿಡೀಯೋ ಸಂವಾದ **ಅಥವಾ** ವೈಯಕ್ತಿಕವಾಗಿ ಖುದ್ದು ಹಾಜರಿರುವಾಗ ಸರಿಯಾಗಿ ಮಾಹಿತಿ ಪರಿಶೀಲಿಸಿಕೊಂಡು ಉಪಸ್ಥಿತರಿರಬೇಕು. ಸಭೆಯಲ್ಲಿ ಕಾರ್ಯಪಾಲಕ ಇಂಜಿನಿಯರ್ **ಅಥವಾ** ಇತರೆ ಅಧಿಕಾರಿಗಳಿಂದ ಮಾಹಿತಿ ಪಡೆಯುವುದು ಸಲ್ಲದು.

12. ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ವಿದ್ಯುದ್ಧೀಕರಣ ಬಾಬ್ತಿನ ಪ್ರಗತಿ ತೀವ್ರಗೊಳಿಸಬೇಕು. ಇಲ್ಲವಾದಲ್ಲಿ ಸಿವಿಲ್ ಕಾಮಗಾರಿ ಪೂರ್ಣವಾದರೂ ಸಹ ಯೋಜನೆಗಳು ಕಾರ್ಯಗತವಾಗುವುದಿಲ್ಲ.

**ಸ್ವಚ್ಛ ಭಾರತ್ ಮಿಷನ್ ಅಭಿಯಾನ:**

13. ರಾಜ್ಯ ಗ್ರಾಮೀಣ ಪ್ರದೇಶವನ್ನು 'ಬಯಲು ಬಹಿರ್ದೆಸೆ ಮುಕ್ತವೆಂದು' ಘೋಷಿಸಿದ ನಂತರವೂ ಶೌಚಾಲಯ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಸಹಾಯ ಧನ ಪಾವತಿಸದಿರುವುದು ಅಸಮರ್ಥನೀಯವಾಗಿದ್ದು, ರಾಯಚೂರು, ಬೆಳಗಾವಿ, ಬೀದರ್, ಬಿಜಾಪುರ, ಚಿತ್ರದುರ್ಗ, ಕಲುಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳು ಸಹಾಯಧನ ಪಾವತಿಗೆ ತುರ್ತು ಕ್ರಮ ವಹಿಸುವುದು.
14. IMIS ನಲ್ಲಿ ಈವರೆವಿಗೆ 2018-19ನೇ ಸಾಲಿನ ಪ್ರಗತಿ ದಾಖಲಿಸದ ಜಿಲ್ಲೆಗಳು ಕೂಡಲೇ ಕಾರ್ಯಪ್ರವೃತ್ತರಾಗುವುದು.
15. ಹೆಚ್ಚುವರಿ ಶೌಚಾಲಯಗಳ ಬೇಡಿಕೆಯನ್ನು (LOB) ಪಂಚತಂತ್ರ ತಂತ್ರಾಂಶದಲ್ಲಿ ಶೀಘ್ರವಾಗಿ ದಾಖಲಿಸಿ ಕಾರ್ಯದೇಶಗಳನ್ನು ವಿತರಿಸಿ ಪ್ರಗತಿ ಸಾಧಿಸಲು ಕ್ರಮವಾಗಬೇಕು.
16. ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಖಾಲಿ ಇರುವ ಸಮಾಲೋಚಕರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲು ಕ್ರಮವಾಗಬೇಕು.

    **(ಕ್ರಮ: ಆಯುಕ್ತರು, ಗ್ರಾನೀಸ ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)**

❖ **ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:**

17. ಪ್ರಧಾನ ಕಾರ್ಯದರ್ಶಿಗಳು, ಯೋಜನೆಯ ಮುನ್ನಡೆಗೆ ಶ್ರಮಿಸಿರುವ ಆಯುಕ್ತರು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಅಭಿನಂದಿಸಿದರು. ಆದರೆ ಸದರಿ ಯೋಜನೆಯಡಿ ವಿವಿಧ ವಲಯಗಳಲ್ಲಿ ಇನ್ನೂ ಹೆಚ್ಚಿನ ಸಾಧನೆಗೆ ಅವಕಾಶವಿರುವುದನ್ನು ಬಳಸಿಕೊಳ್ಳಲು ಕರೆ ನೀಡಿದರು.
18. ಸದರಿ ಯೋಜನೆಯಡಿ ಕೂಲಿ ವೆಚ್ಚ ಹಾಗೂ ಸಾಮಗ್ರಿ ವೆಚ್ಚ (Wage & Material component) ಸಮರ್ಪಕವಾಗಿ ಪಾವತಿಯಾಗದಿರುವುದನ್ನು ಗಮನಿಸಿ, ಇದಕ್ಕೆ ರಾಜ್ಯದಿಂದಲೇ ಮುಂಗಡ ಪಡೆದು ಪಾವತಿಸಲು ಕ್ರಮವಹಿಸುವುದು.
19. ರಾಮನಗರ ಹಾಗೂ ಇನ್ನಿತರೆ ಕೆಲವು ಜಿಲ್ಲೆಗಳಿಗೆ ನಿಗದಿಪಡಿಸಿರುವ ವಾರ್ಷಿಕ ಗುರಿ ಹೆಚ್ಚಿಗೆ ಇದ್ದು, ಜಿಲ್ಲಾವಾರು ಪ್ರತಿ ಮಾಹೆಯ ಪ್ರಗತಿಯನ್ನು ಹಾಗೂ ಸಾಮರ್ಥ್ಯವನ್ನು ಪರಿಗಣಿಸಿ, ವಾರ್ಷಿಕ ಗುರಿಯನ್ನು ಮರು-ಹಂಚಿಕೆ ಮಾಡಲು ಕ್ರಮ ವಹಿಸುವುದು.

20. ಈಗಾಗಲೇ 2019–20ನೇ ಸಾಲಿನಲ್ಲಿ ಅನುಷ್ಠಾನಿಸಲು ಉದ್ದೇಶಿಸಿರುವ ಜಲಾಮೃತ ಯೋಜನೆಗಳ ಬಗ್ಗೆ ತಿಳಿಸಲಾಗಿದ್ದು ಸದರಿ ಯೋಜನೆಯನ್ನು ಫಲಪ್ರದಗೊಳಿಸಲು ಈಗಿನಿಂದಲೇ ಪೂರ್ವ ತಯಾರಿ ಮಾಡಿಕೊಳ್ಳುವುದು.

21. ಜಲಾಮೃತ ಯೋಜನೆ ಸಾಕಾರವಾಗಲು ಅನುವಾಗುವಂತೆ ಬೃಹತ್ ಪ್ರಮಾಣದಲ್ಲಿ ಸಸಿ ನೆಡುವಿಕೆ, ಚೆಕ್ ಡ್ಯಾಮ್, Vented Dam ಗಳ ನಿರ್ಮಾಣಕ್ಕೆ ಆದ್ಯತೆ ನೀಡುವುದು.

22. ಕೃಷಿ, ತೋಟಗಾರಿಕೆ, ಜಲಾನಯನ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಿಬ್ಬಂದಿ ಕೊರತೆಯಿದ್ದಲ್ಲಿ, ಹೊರಗುತ್ತಿಗೆ ಆಧಾರದ ಮೇಲೆ ಅರ್ಹ ವ್ಯಕ್ತಿಗಳನ್ನು ನೇಮಿಸಿಕೊಳ್ಳಲು ನರೇಗಾ ಯೋಜನೆಯಡಿ ಅವಕಾಶವಿದ್ದು ಜಲಾಮೃತ ಯೋಜನೆಯ ಯಶಸ್ಸಿಗೆ ಸದರಿ ಸಿಬ್ಬಂದಿಯ ನೇಮಕಕ್ಕೆ ಕ್ರಮ ವಹಿಸುವುದು.

**(ಕ್ರಮ: ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)**

23. ಮುಂದಿನ ಮುಂಗಾರು ಅವಧಿಯಲ್ಲಿ ಗಿಡಗಳನ್ನು ನೆಡಲು ಅನುವಾಗುವಂತೆ ಈಗಿನಿಂದಲೇ ಅವಶ್ಯ ಸಸಿಗಳಿಗೆ ಇಂಡೆಂಟ್ ನೀಡುವುದು.

24. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೈತರಿಗೆ ದೊರಕುವ ಸಹಾಯದ ಕುರಿತು ಕರಪತ್ರಗಳನ್ನು ಮಾಡಿ ವಿತರಿಸಿರುವುದರ ಕುರಿತು ಪ್ರಧಾನ ಕಾರ್ಯದರ್ಶಿಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಮಾದರಿಯಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಸದರಿ ಯೋಜನೆಯಿಂದ ರೈತರು ಪಡೆದುಕೊಳ್ಳಬಹುದಾದ ವೈಯಕ್ತಿಕ ಕಾಮಗಾರಿಗಳ ವಿವರ ಹಾಗೂ ಇನ್ನಿತರೆ ಸೌಲಭ್ಯಗಳ ವಿವರವನ್ನು ಒಳಗೊಂಡ ಕರಪತ್ರಗಳನ್ನು ಮುದ್ರಿಸಿ ಸುದ್ದಿ ಮಾಧ್ಯಮಗಳಿಗೆ ನೀಡುವ ಮೂಲಕ ಉಚಿತ ಪತ್ರಿಕಾ, ಪ್ರಚಾರಕ್ಕೆ ಒತ್ತು ನೀಡಿ ಯೋಜನೆಯಡಿ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ವಹಿಸುವುದು.

25. ಕೂಲಿ ವೆಚ್ಚ ಮಾಡದೇ ಸಾಮಗ್ರಿ ವೆಚ್ಚ ಮಾತ್ರ ಮಾಡಿದ್ದಲ್ಲಿ ಅವ್ಯವಹಾರವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ರೇಷ್ಮೆ, ತೋಟಗಾರಿಕೆ, ಕೃಷಿ, ಜಲಾನಯನ ಒಗ್ಗೂಡುವಿಕೆ, ಮಾನವ ದಿನ ಪರಿಷ್ಕರಣೆ ಕುರಿತಂತೆ ಆಯುಕ್ತರು, ನರೇಗಾ ನೀಡಿರುವ ನಿರ್ದೇಶನಗಳನ್ನು ತಕ್ಷಣ ಅನುಪಾಲನೆ ಮಾಡಬೇಕು.

26. Convergence ನಡಿ ವಿವಿಧ ವಲಯಗಳಡಿ ಜಿಲ್ಲಾವಾರು ಪ್ರಗತಿಯಲ್ಲಿ ಹಿಂದೆ ಇರುವ ಜಿಲ್ಲೆಗಳು ತಮ್ಮ ಜಿಲ್ಲೆಗಳಲ್ಲಿ ಪ್ರಗತಿ ಸಾಧಿಸಬಹುದಾದ ವಲಯಗಳಲ್ಲಿ ಹೆಚ್ಚಿನ ಮುತುವರ್ಜಿ ವಹಿಸುವುದು.

27. ಈ ಹಿಂದೆ ಮಾನ್ಯ ಸಚಿವರು ಸೂಚನೆ ನೀಡಲಾದಂತೆ, ಚೆಕ್ ಡ್ಯಾಂಗಳ ನಿರ್ಮಾಣಕ್ಕೆ ಜಿಲ್ಲೆಗಳಿಂದ ಬೇಡಿಕೆ ಮಾಹಿತಿಯನ್ನು ಒಂದು ವಾರದೊಳಗಾಗಿ ಪಡೆದು ಅನುಷ್ಠಾನಕ್ಕೆ ಕ್ರಮ ವಹಿಸುವುದು.

28. ಶಾಲಾ ಮತ್ತು ಅಂಗನವಾಡಿ ಶೌಚಾಲಯಗಳನ್ನು ಈವರೆವಿಗೆ ಪ್ರಾರಂಭಿಸಿದ ಜಿಲ್ಲೆಗಳು ಕೂಡಲೇ ಪ್ರಾರಂಭಿಸುವುದು.

29. ನರೇಗಾ ಯೋಜನೆಯಡಿ ನಿಗದಿಪಡಿಸಲಾದ ಕೂಲಿ ವೆಚ್ಚ ಹಾಗೂ ಸಾಮಗ್ರಿ ವೆಚ್ಚದ ಅನುಪಾತದಂತೆಯೇ ಕಾಮಗಾರಿಗಳನ್ನು ಕೈಗೊಳ್ಳುವುದು. ಯಾವುದೇ ಕಾರಣಕ್ಕೂ ಕೇವಲ ಸಾಮಗ್ರಿ ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳಬಾರದು.

30. 2017-18ನೇ ಸಾಲಿನ ಮುಂದುವರೆದ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವುದು.

31. ರೈಲ್ವೆ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸುವುದು.

**(ಕ್ರಮ: ಆಯುಕ್ತರು, ನರೇಗಾ, ಗ್ರಾನೀಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)**

❖ **ಗ್ರಾಮೀಣ ಸಂಪರ್ಕ ಮತ್ತು ಗ್ರಾಮ ವಿಕಾಸ:**

32. ನಬಾರ್ಡ್ 17ರಿಂದ 22 ರವರೆವಿಗಿನ ಮಾಲಿಕೆಯಡಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸಲು ಕ್ರಮ ಕೈಗೊಂಡು ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಅನುಷ್ಠಾನ ಸಂಸ್ಥೆ PRED ಗೆ ಅನುದಾನ ಬಿಡುಗಡೆ ಮಾಡಿ ನಿಯಮಿತವಾಗಿ ಪ್ರಗತಿ ಪರಾಮರ್ಶಿಸಿ, ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

33. ನಬಾರ್ಡ್-23 ರ ಮಾಲಿಕೆಯಡಿ ಮಂಜೂರಾದ ಕಾಮಗಾರಿಗಳನ್ನು ನಬಾರ್ಡ್-24 ರಲ್ಲಿ ಮಂಜೂರಾತಿ ನೀಡಿದಂತೆ ಈಗಾಗಲೇ ಆಡಳಿತಾತ್ಮಕ ಅನುಮೋದನೆಯನ್ನು ಆಗಸ್ಟ್-2018 ರಲ್ಲಿ ಸರ್ಕಾರದಿಂದ ನೀಡಲಾಗಿದೆ. ಸದರಿ ಯೋಜನೆಯಡಿ ಯಾವುದೇ ಕಾರಣಕ್ಕೂ ಅನುದಾನ ವ್ಯಪಗತವಾಗದಂತೆ ಎಚ್ಚರಿಕೆ ವಹಿಸುವುದು.

34. ನಬಾರ್ಡ್ ಯೋಜನೆಯ ಅನುಷ್ಠಾನದಲ್ಲಿ ವಿಳಂಬ ನೀತಿಯನ್ನು ಅನುಸರಿಸುವಂತಹ ಇಂಜಿನಿಯರ್‌ಗಳ ಮೇಲೆ ಸೂಕ್ತ ಕ್ರಮ ಜರುಗಿಸುವುದು. ಖಜಾನೆಯಲ್ಲಿ ಕೆ-2 ಸಮಸ್ಯೆಯಿದ್ದಲ್ಲಿ ನಿರ್ದೇಶಕರು, ಗ್ರಾಮೀಣ ಸಂಪರ್ಕ/ಗ್ರಾಮ ವಿಕಾಸ ಹಾಗೂ ಸಂಬಂಧಿಸಿದ ಜಿಲ್ಲೆಗಳ CEO ಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಮನ್ವಯದಲ್ಲಿ ತಕ್ಷಣ ಬಗೆಹರಿಸಬೇಕು.

❖ <u>ಸುವರ್ಣ ಗ್ರಾಮೋದಯ, ಗ್ರಾಮ ವಿಕಾಸ ಹಾಗೂ ಮುಖ್ಯ ಮಂತ್ರಿ ಗ್ರಾಮ ವಿಕಾಸ:</u>

35. 2006 ರಿಂದ 2012–13 ರವರೆವಿಗೆ ಅನುಷ್ಠಾನಿಸಲಾದ ಸುವರ್ಣ ಗ್ರಾಮೋದಯ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸುವುದು. ಯಾವುದೇ ಕಾರಣದಿಂದ ಕಾಮಗಾರಿಗಳನ್ನು ಕೈಗೊತ್ತಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ ಸದರಿ ಕಾಮಗಾರಿಗಳನ್ನು ಕೈಬಿಡಲು ಕ್ರಮ ವಹಿಸುವುದು ಅಲ್ಲದೆ ಸದರಿ ಯೋಜನೆಯಡಿ ಉಳಿತಾಯವಾಗಿರುವ ಅನುದಾನದಲ್ಲಿ ಈಗಾಗಲೇ ಸರ್ಕಾರದಿಂದ ಅನುಮೋದನೆ ನೀಡಿರುವ ಗ್ರಾಮಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸುವುದು.

36. ಗ್ರಾಮ ವಿಕಾಸ ಯೋಜನೆಯಡಿ ಬಿಡುಗಡೆಗೆ ಬಾಕಿಯಿರುವ ಅನುದಾನವನ್ನು ಪೂರ್ಣವಾಗಿ ಸರ್ಕಾರದಿಂದ ಬಿಡುಗಡೆ ಮಾಡಿ **ಮಾರ್ಚ್–31, 2019 ರೊಳಗಾಗಿ** ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

37. ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಅನುದಾನ ಲಭ್ಯತೆ ಅನುಸಾರವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

**(ಕ್ರಮ: ನಿರ್ದೇಶಕರು, ಸುವರ್ಣ ಗ್ರಾಮೋದಯ, IFA, RDPR, ಮುಖ್ಯ ಇಂಜಿನಿಯರ್ ಪಂ.ಇಲಾಖೆ ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)**

❖ <u>ಪಂಚಾಯತ್ ರಾಜ್ ವಿಷಯಗಳು:</u>

38. 14ನೇ ಹಣಕಾಸು ಆಯೋಗದ ಕಾರ್ಯಕ್ಷಮತೆ ಅನುದಾನದ ಕುರಿತು ಗ್ರಾಮ ಪಂಚಾಯತಿ ಅಧಿಕಾರಿ ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡುವುದು.

39. ಆಧಾರ್ ತಿದ್ದುಪಡಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ನಾಮಫಲಕಗಳನ್ನು ಅಳವಡಿಸುವುದು.

40. ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ಸಂಗ್ರಹಣೆಗೆ ಹೆಚ್ಚಿನ ಆದ್ಯತೆ ನೀಡುವುದು.

41. 2018–19 ಮತ್ತು 2019–20 ನೇ ಸಾಲಿನ GPDP ಕ್ರಿಯಾ ಯೋಜನೆಯನ್ನು Plan Plus ನಲ್ಲಿ ದಾಖಲಾತಿಗೊಳಿಸುವುದು.

**(ಕ್ರಮ: ನಿರ್ದೇಶಕರು, ಪಂ.ರಾಜ್ I ಮತ್ತು II ಹಾಗೂ ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)**

❖ <u>ಡಿ.ಎಸ್.ಎಸ್. ತಂತ್ರಾಂಶದಲ್ಲಿ ಪ್ರಗತಿ ದಾಖಲಾತಿ:</u>

42. ಪ್ರತಿ ಸಭೆಯಲ್ಲಿಯೂ ಗ್ರಾಅಪ ಇಲಾಖೆಯ ಲಿಂಕ್ ಡಾಕ್ಯುಮೆಂಟ್ ಯೋಜನೆಗಳ ಪ್ರಗತಿಯನ್ನು ಪ್ರತಿ ಮಾಹೆ ಡಿ.ಎಸ್.ಎಸ್. ತಂತ್ರಾಂಶದಲ್ಲಿ ಕಡ್ಡಾಯವಾಗಿ ಇಂಧೀಕರಿಸಿ ದಾಖಲಿಸಲು ಸೂಚಿಸಲಾಗಿದ್ದರೂ, ಬೀದರ್, ಧಾರವಾಡ, ಚಿತ್ರದುರ್ಗ, ತುಮಕೂರು, ಯಾದಗಿರ್, ಮಂಗಳೂರು, ಕಾರವಾರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಬಿಡುಗಡೆಗೆ ಎದುರಾಗಿ ಕೇವಲ ಶೇ.30 ರಷ್ಟು ಪ್ರಗತಿ ದಾಖಲಾಗಿರುವುದರಿಂದ ಮತ್ತೊಮ್ಮೆ ಪರಿಶೀಲಿಸಿ ಪ್ರಗತಿ ಇಂಧೀಕರಿಸಲು ಸೂಚಿಸಿದರು. ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಯಾಗಿರುವ ಕುಡಿಯುವ ನೀರಿನ ಬೋರ್‌ವೆಲ್‌ಗಳ ನಿರ್ವಹಣೆ ವೆಚ್ಚವನ್ನು ಕೊಳವೆ ಬಾವಿಗಳ ದುರಸ್ತಿ, ಮೋಟಾರ್ ಪಂಪುಗಳ ದುರಸ್ತಿ ಸೇವೆಗಾಗಿ ಪಂಚಾಯತ್ ರಾಜ್ ಸಂಸ್ಥೆಗಳ ಸಲುವಾಗಿ ವಿನಿಯೋಗಿಸಿ, ವೆಚ್ಚವನ್ನು ಇಂಧೀಕರಿಸಲು ನಿರ್ದೇಶಿಸಲಾಯಿತು. ಅಲ್ಲದೆ ಮುಂದಿನ ಸಭೆಯಲ್ಲಿ ಲಿಂಕ್ ಡಾಕ್ಯುಮೆಂಟ್ ಕಾರ್ಯಕ್ರಮಗಳ ಹಾಗೂ ಜಿಲ್ಲಾವಲಯ ಕಾರ್ಯಕ್ರಮಗಳ (ಲಮ್‌ಸಮ್ ಹೊರತುಪಡಿಸಿ) ಜಿಲ್ಲಾವಾರು ಪ್ರಗತಿ ಪರಿಶೀಲನೆ ನಡೆಸಲು ವಿಷಯಸೂಚಿಯನ್ನು ಅಳವಡಿಸಲು ಸೂಚಿಸಿದರು.

**(ಕ್ರಮ: ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)**

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸಂಖ್ಯೆ: ಗ್ರಾಅಪ/107/ಯೋಉಮಾ/2018

ದಿನಾಂಕ: 31.12.2018

ಇವರಿಗೆ :

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ.
4. ಉಪ ಕಾರ್ಯದರ್ಶಿಗಳು, ಎಸ್.ಬಿ.ಎಮ್.
5. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್.
6. ನಿರ್ದೇಶಕರು, ಪಂಚಾಯತ್ ರಾಜ್– 1.
7. ನಿರ್ದೇಶಕರು, ಪಂಚಾಯತ್ ರಾಜ್–2.
8. ನಿರ್ದೇಶಕರು, ಸ್ವಉ.ಕಾ.
9. ನಿರ್ದೇಶಕರು, ಗ್ರಾಮ ವಿಕಾಸ.

10. ನಿರ್ದೇಶಕರು, ಇ–ಆಡಳಿತ.
11. ಆಂತರಿಕ ಆರ್ಥಿಕ ಸಲಹೆಗಾರರು.
12. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ.
13. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
14. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.
15. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
16. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
17. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
18. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
19. ಉಪ ನಿರ್ದೇಶಕರು, ರಸ್ತೆ ಮತ್ತು ಸೇತುವೆ.

ಪ್ರತಿ ಮಾಹಿತಿಗಾಗಿ:–

1. ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.